





(6ನೇ ಪುಟದಿಂದ)

ಅಂತರಗಳಲ್ಲಿ ಜಲಪಾತ ಇದೆ ಎನ್ನುವುದು ನೀರು ಭೋರ್ಗರೆಯುವ ಸದ್ದು ಕೇಳಿದಾಗ ಖಚಿತವಾದಂತೆನಿಸುತ್ತದೆ. ಜಲಪಾತದಿಂದ ನೀರು ಹಾಲ್ನೊರೆಯಂತೆ ಕೆಳಗೆ ಹರಿಯುತ್ತಿದ್ದರೆ ಕೊಡಗಿನ ಯಾವ ಜಲಪಾತಗಳಿಗೂ ಒಣಚಲು ಕಡಿಮೆ ಇಲ್ಲ ಎಂದರೆ ಅತಿಶಯೋಕ್ತಿ ಅಲ್ಲ.

ಒಣಚಲು ಜಲಪಾತ ಖಾಸಗಿ ಪ್ರದೇಶವಾಗಿದ್ದು, ಅದರ ಮಾಲೀಕರ ಬಗ್ಗೆ ಸ್ಪಷ್ಟವಾಗಿ ತಿಳಿದಿಲ್ಲ. ಅಲ್ಲದೇ, ಈ ಜಲಪಾತಕ್ಕೆ ಹೆಚ್ಚಿನ ಪ್ರವಾಸಿಗರು ಆಗಮಿಸುವುದೂ ಇಲ್ಲ. ಸ್ಥಳೀಯರೊಂದಿಗೆ ಅಪರೂಪವಾಗಿ ಮಾತ್ರ ಕೆಲವು ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಾರೆ.

ಗಾಳಿಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸುಮಾರು 1,200ಕ್ಕೂ ಅಧಿಕ ಮಂದಿ ವಾಸವಿದ್ದಾರೆ. ಆದರೆ, ಹೆಚ್ಚಿನ ಮಂದಿ ಹಿಂದೆ ತಮ್ಮ ಆಸ್ತಿಯನ್ನು ಮಾರಾಟ ಮಾಡಿ ಇಲ್ಲಿಂದ ನಗರ ಪ್ರದೇಶಗಳಿಗೆ ತೆರಳಿದ್ದಾರೆ ಎನ್ನುತ್ತಾರೆ ಗ್ರಾಮಸ್ಥರು.

ಎತ್ತರ ಪ್ರದೇಶದಿಂದ ಧುಮ್ಮಿಕುವ ನೀರನ್ನು ಕಂಡೊಡನೆ ಅಬ್ಬಿ ಫಾಲ್ಸ್ ಚೆಲುವು ಕಣ್ಣ ಮುಂದೆ ಬರುತ್ತದೆ. ಕ್ಷಣಕಾಲ ಅಬ್ಬಿ ಫಾಲ್ಸ್ ಸೌಂದರ್ಯವನ್ನೇ ನೋಡುತ್ತಿದ್ದೇವೆ ಎಂದು ಅನಿಸಬಹುದು. ಆದರೆ, ಇದು ಒಣಚಲು ಜಲಪಾತ. ಇದು ಸೌಂದರ್ಯದಲ್ಲಿ ಅಬ್ಬಿ ಫಾಲ್ಸ್ ಅನ್ನು ಕೊಂಚ ಮಟ್ಟಿಗೆ ಹೋಲುತ್ತದೆ ಎನ್ನುವುದು ನಿಜ.

ಒಂದಲ್ಲ ಎರಡು!: ಜಲಪಾತದ ಬಳಿ ತಲುಪುತ್ತಿದ್ದಂತೆಯೇ ನೀರಿನದೇ ಸದ್ದು. ತುಸು ಸಮಯ ನೀರಿನಲ್ಲಿ ಕಳೆದು, ಶ್ರಮ ವಹಿಸಿ, ಬಂಡೆ ಹಾಗೂ ಕಲ್ಲಿನ ಮೂಲಕ ಮುಂದೆ ಸಾಗಿದರೆ ಮತ್ತೊಂದು ರಮಣೀಯ ಫಾಲ್ಸ್ ಕಣ್ಮುಂದೆ! ವಿಶಾಲ ಬಂಡೆಗಳ ನಡುವೆ ಧುಮ್ಮಿಕ್ಕುವ ಈ ಜಲಪಾತವನ್ನು ನೋಡುವುದೇ ಹಬ್ಬ. ಮಳೆಗಾಲದಲ್ಲಾದರೆ ಆ ಸುಂದರ ಕ್ಷಣಗಳನ್ನು ಖಂಡಿತಾ ಮರೆಯಲಾಗದು.